### ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 396 |
| ಸದಸ್ಯರ ಹೆಸರು | : ಶ್ರೀ ಲಹರ್ ಸಿಂಗ್ ಸಿರೋಯಾ |
| ಉತ್ತರಿಸುವ ಸಚಿವರು | : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | : 11-12-2020 |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಸಾರಿಗೆ ನಿಗಮಗಳಲ್ಲಿ ಬಸ್ ಮಾರ್ಗ ತಪಾಸಣೆ ವೇಳೆ ಸಣ್ಣ ತಪ್ಪು ಕಂಡು ಬಂದರೂ ನಿರ್ವಾಹಕರುಗಳನ್ನು ಅಮಾನತ್ತು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;</td><td>ಸಾರಿಗೆ ನಿಗಮಗಳಲ್ಲಿ ಬಸ್ ಮಾರ್ಗ ತಪಾಸಣೆ ವೇಳೆ ಸಣ್ಣ ತಪ್ಪುಗಳಿಗೆ ನಿರ್ವಾಹಕರುಗಳನ್ನು ಅಮಾನತ್ತು ಮಾಡುತ್ತಿರುವುದಿಲ್ಲ. ಆದರೆ, ಗಂಭೀರ ಸ್ವರೂಪದ ಪ್ರಕರಣ ಕಂಡು ಬಂದಲ್ಲಿ ಮಾತ್ರ ಅಮಾನತ್ತುಗೊಳಿಸಲಾಗಿರುತ್ತದೆ.</td></tr>
<tr><td>ಆ.</td><td>2020ನೇ ಸಾಲಿನಲ್ಲಿ ಅಮಾನತ್ತುಗೊಳಿಸಲಾದ ನಿರ್ವಾಹಕರುಗಳ ಸಂಖ್ಯೆ ಎಷ್ಟು; (ಹೆಸರುಗಳು ಮತ್ತು ಕಾರಣಗಳ ಸಹಿತ ಪೂರ್ಣ ವಿವರ ನೀಡುವುದು)</td><td>ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ 2020ನೇ ಸಾಲಿನಲ್ಲಿ ಅಮಾನತ್ತುಗೊಳಿಸಲಾದ ನಿರ್ವಾಹಕರುಗಳ ಸಂಖ್ಯೆ ಈ ಕೆಳಗಿನಂತಿದೆ:<br><br>ಸಂಸ್ಥೆಗಳು — ನಿರ್ವಾಹಕರುಗಳ ಸಂಖ್ಯೆ<br>ಕ.ರಾ.ರ.ಸಾ.ನಿಗಮ — 403<br>ಬೆಂ.ಮ.ಸಾ.ಸಂಸ್ಥೆ — 47<br>ವಾ.ಕ.ರ.ಸಾ.ಸಂಸ್ಥೆ — 99<br>ಈ.ಕ.ರ.ಸಾ.ಸಂಸ್ಥೆ — 201<br><br>ಅಮಾನತ್ತುಗೊಳಿಸಲಾದ ನಿರ್ವಾಹಕರುಗಳ ಹೆಸರುಗಳು ಮತ್ತು ಕಾರಣಗಳ ಸಹಿತ ಪೂರ್ಣ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಇ.</td><td>ಅಮಾನತ್ತು ಮಾಡಲು ಇರುವ ಕಾನೂನಿನಲ್ಲಿರುವ ಅಂಶಗಳಾವುವು? (ವಿವರಗಳನ್ನು ಒದಗಿಸುವುದು)</td><td>ಸಾರಿಗೆ ನಿಗಮಗಳ ಚಾಲನಾ ಸಿಬ್ಬಂದಿಗಳನ್ನು ತಪಾಸಣೆಗೆ ಒಳಪಡಿಸಿ, ಸಂಸ್ಥೆಗಳ ಸ್ಥಾಯಿ ಆದೇಶಗಳಲ್ಲಿ ಅಸಾಧಾರಣ ಕೆಂಪು ಗುರುತಿನ ಪ್ರಕರಣವೆಂದು (ORMC) ವರ್ಗೀಕರಿಸಿರುವ ಗಂಭೀರ ಸ್ವರೂಪದ ದುರ್ವರ್ತನೆ/ದುರ್ನಡತೆಗಳನ್ನು ತಮ್ಮ ಕರ್ತವ್ಯದಲ್ಲಿ ಎಸಗಿದ ಪ್ರಕರಣಗಳಲ್ಲಿ ಮಾತ್ರ ತಪ್ಪಿತಸ್ಥರ ವಿರುದ್ಧ ಕ.ರಾ.ರ.ಸಾ.ನಿಗಮದ (ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971ರ ನಿಯಮ-21ರನ್ವಯ ಕಡ್ಡಾಯವಾಗಿ, ವಿಚಾರಣಾ ಪೂರ್ವ ಅಮಾನತ್ತುಗೊಳಿಸಲಾಗುತ್ತಿದೆ.</td></tr>
</table>

ಸಂಖ್ಯೆ: ಟಿಡಿ 255 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು